ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಲಯ, ಶ್ರೀರಂಗಪಟ್ಟಣ.

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ **: 38/2020**

ಚಾ.ಸಾ. **:-15**
ಪ್ರಾ.ಸಾ. **:-07**

ಹೆಸರು : ಮಂಜುನಾಥ

ತಂದೆಯ ಹೆಸರು : ಕರಿಯಪ್ಪ

ವಯಸ್ಸು : 41 ವರ್ಷ

ಉದ್ಯೋಗ : ಖಾಸಗಿ ಕೆಲಸ

ವಾಸಸ್ಥಳ : ಸುಂಕದಕಟ್ಟೆ, ಬೆಂಗಳೂರು.

---

ಪ್ರಮಾಣೀಕರಿಸಲಾದ ದಿನಾಂಕಃ- **22.06.2026**

<u>ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :</u>

ದಿನಾಂಕಃ 31.01.2019 ರಂದು ನಾನು ಮತ್ತು ಚಾ.ಸಾ-7 ನನ್ನ ಕಾರಿನಲ್ಲಿ ಮೈಸೂರಿಗೆ ಹೋಗಿ ವಾಪಸ್ಸು ಬೆಂಗಳೂರಿಗೆ ಹೋಗುತ್ತಿದ್ದೆವು. ಆ ಸಮಯದಲ್ಲಿ ಚಾ.ಸಾ-7 ನನ್ನ ಕಾರನ್ನು ಚಾಲನೆ ಮಾಡುತ್ತಿದ್ದರು. ರಾತ್ರಿ ಸುಮಾರು 9.45 ರ ಸಮಯದಲ್ಲಿ ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿ ಒಂದು ನೀರು ಶುದ್ಧಿಕರಣ ಘಟಕದ ಬಳಿ ನಮ್ಮ ಮುಂದೆ ಒಂದು ಟೊಯೋಟಾ ಕಾರು ಹೋಗುತ್ತಿತ್ತು. ಬೆಂಗಳೂರಿನಿಂದ ಮೈಸೂರಿಗೆ ಹೋಗುತ್ತಿದ್ದ Swift Desire ಕಾರು ಸದರಿ ಹೆದ್ದಾರಿಯ ಡಿವೈಡರನ್ನು ದಾಟಿ ನಮ್ಮ ರಸ್ತೆಗೆ ಬಂದು ನಮ್ಮ ಮುಂದೆ ಹೋಗುತ್ತಿದ್ದ ಟೊಯೋಟಾ ಕಾರಿಗೆ ಡಿಕ್ಕಿಪಡಿಸಿರುತ್ತದೆ. ಆ ಸಮಯದಲ್ಲಿ ಟೊಯೋಟಾ ಕಾರು ರಸ್ತೆಯಲ್ಲಿ ನಿಂತಿದ್ದು, ನಮ್ಮ ಕಾರು ಸದರಿ ಕಾರಿಗೆ ಹಿಂಭಾಗದಿಂದ ಡಿಕ್ಕಿಪಡಿಸಿರುತ್ತದೆ. ನನಗೆ ಮತ್ತು ಚಾ.ಸಾ-7 ರವರಿಗೆ ಯಾವುದೇ ಗಾಯಗಳಾಗಿರಲಿಲ್ಲ. ಟೊಯೋಟಾ ಕಾರಿನಲ್ಲಿದ್ದವರಿಗೆ ಗಾಯಗಳಾಗಿರುತ್ತವೆ. ಅಪಘಾತಪಡಿಸಿದ Swift Desire ಕಾರಿನಲ್ಲಿ ಚಾಲಕನ ಪಕ್ಕ ಕುಳಿತಿದ್ದ

ವ್ಯಕ್ತಿಗೆ ತೀವ್ರ ಗಾಯಗಳಾಗಿದ್ದವು. ನಂತರ ಆ್ಯಂಬುಲೆನ್ಸ್ ಮೂಲಕ ಗಾಯಾಳುಗಳನ್ನು ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇವೆ. ನಂತರದಲ್ಲಿ Swift Desire ಕಾರಿನಲ್ಲಿದ್ದ ವ್ಯಕ್ತಿ ಮೃತಪಟ್ಟಿರುವುದಾಗಿ ತಿಳಿದಿರುತ್ತದೆ. ಸ್ಥಳದಲ್ಲಿ ವಿಚಾರಿಸಿದಾಗ ಸದರಿ ಕಾರನ್ನು ಆನಂದ್ ಎನ್ನುವವರು ಚಾಲನೆ ಮಾಡುತ್ತಿದ್ದರು ಎಂದು ಗೊತ್ತಾಗಿರುತ್ತದೆ.

ಪೊಲೀಸರು ಅಪಘಾತಕ್ಕೆ ಸಂಬಂಧಿಸಿದಂತೆ ಸ್ಥಳ ಮಹಜರ್ ಮಾಡಿರುತ್ತಾರೆ. ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು. ಸಾಕ್ಷಿಯ ಸಹಿ ಇರುವ ದಾಖಲೆಯು ಮಹಜರ್ ಆಗಿದ್ದು, ಅದನ್ನು ಈಗ ನಿಪಿ-19 ಎಂದು, ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ನನ್ನ ಜೊತೆ ಬೇರೆ ಸಾಕ್ಷಿಗಳು ಸಹ ಹಾಜರಿದ್ದರು. ಸದರಿ ಮಹಜರ್ ನಲ್ಲಿ ಪೊಲೀಸರು ಕೃತ್ಯ ಸ್ಥಳದ ಕಚ್ಚಾ ನಕಾಶೆಯನ್ನು ತಯಾರು ಮಾಡಿರುತ್ತಾರೆ. ಸದರಿ ಕಚ್ಚಾ ನಕಾಶೆಯನ್ನು ಈಗ ನಿಪಿ-20 ಎಂದು, ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು.

ರಸ್ತೆ ಅಪಘಾತಕ್ಕೆ ಸಂಬಂಧಿಸಿದಂತೆ ಸದರಿ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಸಹಿಯನ್ನು ನಾನು ಅಪಘಾತ ಸ್ಥಳದ ಬಳಿ ಮಾಡಿರುತ್ತೇನೆ. ಸದರಿ ದಾಖಲೆಗೆ ಸಹಿ ಮಾಡುವಾಗ ನನ್ನ ಸಮಕ್ಷಮ ಪೊಲೀಸರು ಅಪಘಾತಕ್ಕೆ ಸಂಬಂಧಿಸಿದಂತೆ 3 ವಾಹನಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಈಗ ನೋಡುತ್ತಿರುವ ಫೋಟೋಗಳಲ್ಲಿರುವ 3 ವಾಹನಗಳನ್ನು ಆ ದಿನ ಅಮಾನತ್ತುಪಡಿಸಿಕೊಂಡಿರುತ್ತಾರೆ. Swift Desire ಕಾರಿನ 4 ಫೋಟೋಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ-8 ರಿಂದ 11 ಎಂದು ಗುರುತಿಸಲಾಗಿದೆ. ಟೊಯೋಟಾ ಕಾರಿನ 1 ಫೋಟೋವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-12 ಎಂದು ಗುರುತಿಸಲಾಗಿದೆ. Maruthi Swift ಕಾರಿನ 2 ಫೋಟೋಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ-13 ಮತ್ತು 14 ಎಂದು ಗುರುತಿಸಲಾಗಿದೆ.

ಮಹಜರ್ ಸಮಯದಲ್ಲಿ ಪೊಲೀಸರು ಫೋಟೋ ತೆಗೆದಿದ್ದು ಅದರಲ್ಲಿ ನನ್ನ ಮತ್ತು ಉಳಿದ ಸಾಕ್ಷಿದಾರರ ಭಾವಚಿತ್ರ ಇರುತ್ತದೆ. ಸದರಿ ಫೋಟೋಗಳನ್ನು ಈಗಾಗಲೇ ನಿಪಿ-2 ರಿಂದ 7 ಎಂದು ಗುರುತಿಸಲಾಗಿದೆ.

Maruthi Swift ಕಾರು ನನಗೆ ಸೇರಿದ್ದು, ನಾನು ಪೊಲೀಸರ ನೋಟೀಸಿಗೆ ಉತ್ತರ ನೀಡಿ ವಾಹನ ಬಿಡುಗಡೆ ಮಾಡಿಸಿಕೊಂಡಿರುತ್ತೇನೆ.

ಸದರಿ ಅಪಘಾತವು ಬೆಂಗಳೂರಿನಿಂದ ಮೈಸೂರಿಗೆ ಹೋಗುತ್ತಿದ್ದ Swift Desire ಕಾರಿನ ಚಾಲಕನ ಅಜಾಗರೂಕತೆಯಿಂದ ಆಗಿರುತ್ತದೆ. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯೇ ಆ ದಿನ ಸದರಿ ಕಾರನ್ನು ಚಾಲನೆ ಮಾಡುತ್ತಿದ್ದರು.

<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :</u>

ನಮ್ಮ ಕಾರಿನಲ್ಲಿ ಇಬ್ಬರು ಹೋಗುತ್ತಿದ್ದೆವು. ಸದರಿ ರಸ್ತೆಯಲ್ಲಿ ಹೆಚ್ಚು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಅಪಘಾತ ಸ್ಥಳದಲ್ಲಿ ರಸ್ತೆ ದೀಪಗಳು ಇರಲಿಲ್ಲ. ಸದರಿ ರಸ್ತೆಯಲ್ಲಿ ಪ್ರಯಾಣಿಕರು ಬಂದು ಹತ್ತಲು ಬಸ್ ನಿಲ್ದಾಣ ಇತ್ತು ಎಂದರೆ ಸಾಕ್ಷಿ ನಾನು ಆ ರಸ್ತೆಯಲ್ಲಿ ಹೆಚ್ಚಾಗಿ ಓಡಾಡಿರುವುದಿಲ್ಲ, ಹಾಗಾಗಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಜಾಗದಲ್ಲಿ ಒಂದು ರಸ್ತೆಯ ಉಬ್ಬು ಇತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ಕಾರಿನ ಮುಂಭಾಗದಲ್ಲಿ ಚಾಲಕನ ಪಕ್ಕ ಕುಳಿತಿದ್ದೆ. ಸದರಿ ಅಪಘಾತವಾಗುವುದನ್ನು ನಾನು ನೋಡಿರುವುದಿಲ್ಲ ಎಂದರೆ ಸುಳ್ಳು. ಆರೋಪಿಯ ಕಾರು ಟೊಯೋಟಾ ಕಾರಿಗೆ ಡಿಕ್ಕಿಪಡಿಸಿಲ್ಲ ಎಂದರೆ ಸುಳ್ಳು. ಟೊಯೋಟಾ ಕಾರು ರಸ್ತೆಯ ಉಬ್ಬಿನ ಬಳಿ ಬ್ರೇಕ್ ಹಾಕಿದಾಗ ನನ್ನ ಕಾರು ಅವರಿಗೆ ಡಿಕ್ಕಿಪಡಿಸಿರುತ್ತದೆ ಎಂದರೆ ಸುಳ್ಳು. ನಾನು ಪೊಲೀಸರಿಗೆ ಹೇಳಿಕೆಯನ್ನು ಮಹಜರ್ ಸ್ಥಳದಲ್ಲಿ ಕೊಟ್ಟಿರುತ್ತೇನೆ. ಸದರಿ ಪೊಲೀಸರ ಹುದ್ದೆ ನನಗೆ ಗೊತ್ತಿಲ್ಲ.

ಪೊಲೀಸರು ಮಹಜರ್ ಗೆ ಬರಬೇಕೆಂದು ನೋಟೀಸ್ ಕೊಟ್ಟಿಲ್ಲ, ಹಾಗೆಯೇ ಕರೆದಿರುತ್ತಾರೆ. ಆರೋಪಿಯನ್ನು ಪೊಲೀಸರು ನನಗೆ ತೋರಿಸಿರುತ್ತಾರೆ ಎಂದರೆ ಸುಳ್ಳು. ನಾನು ಸಹಿಯನ್ನು ಪೊಲೀಸ್ ಠಾಣೆಯ ಬಳಿ ಮಾಡಿರುತ್ತೇನೆ ಎಂದರೆ ಸುಳ್ಳು. ಸದರಿ ಅಪಘಾತವು ಸರ್ವೀಸ್ ರಸ್ತೆಯಲ್ಲಿ ಆಗಿಲ್ಲ, ಮುಖ್ಯ ರಸ್ತೆಯಲ್ಲಿ ಆಗಿರುತ್ತದೆ, ಸಾಕ್ಷಿಯು ಮುಂದುವರೆದು ಆ

ಸಮಯದಲ್ಲಿ ಹಳೆಯ ಹೆದ್ದಾರಿ ಇತ್ತು. ಆರೋಪಿ ನಿರ್ಲಕ್ಷ್ಯತನದಿಂದ ಅಪಘಾತ ಆಗದಿದ್ದರೂ ವಿಮೆ ಪರಿಹಾರದ ಸಲುವಾಗಿ ಸುಳ್ಳು ದೂರು ನೀಡಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ :</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

ಪ್ರಧಾನ ಹಿರಿಯ ಸಿಜೆ ಮತ್ತು
ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.

**ಸಾಕ್ಷಿದಾರರ ಸಹಿ.**